# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್** (ಎಸ್.ಸಿ./ಎಸ್.ಟಿ.) **ನಂ. 40/2024**

**ಪಿರ್ಯಾದಿ** – ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ ಪೊಲೀಸರು.**

**– ವಿರುದ್ಧ –**

**ಆರೋಪಿ** – **ಮಹಾಂತೇಶ ಬಿನ್ ಸೋಮಶೇಖರಯ್ಯ,**
ವಯಸ್ಸು: 42 ವರ್ಷ, ವ್ಯವಸಾಯ,
ವಾಸ: ಬಾಲೇನಹಳ್ಳಿ ಗ್ರಾಮ, ಹಿರಿಯೂರು ತಾ. ಚಿತ್ರದುರ್ಗ ಜಿಲ್ಲೆ

## —:: ದೋಷಾರೋ ಪ ಣೆ ::—

***ಶ್ರೀ ಗಂಗಾಧರ ಚನ್ನಬಸಪ್ಪ ಹಡಪದ,*** ***ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*** *ಚಿತ್ರದುರ್ಗ* ಆದ ನಾನು

**ಆರೋಪಿಯಾದ** ನಿಮ್ಮನ್ನು ಈ ಕೆಳಕಂಡ ಆರೋಪಣೆಗೆ ಒಳಪಡಿಸುತ್ತೇನೆ.

ಆರೋಪಿಯಾದ ನೀನು ದಿನಾಂಕ 6.10.2024 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಚಾಸಾ:1 ಗಂಗಾಧರರವರು ಹಿರಿಯೂರು ತಾಲೂಕ ಬಾಲೇನಹಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ಮುಂಭಾಗದ ಸಾರ್ವಜನಿಕ ರಸ್ತೆಯಲ್ಲಿ ನಡೆದುಕೊಂಡು ಬರುತ್ತಿರುವಾಗ ಅವರನ್ನು ತಡೆದು ನಿಲ್ಲಿಸಿದ್ದು **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ 126(2) ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು, ಸದರಿ ಗಂಗಾಧರ ಅವರಿಗೆ ನಮ್ಮ ಹೊಲದಲ್ಲಿ ಶೇಂಗಾ ಕಿತ್ತಿದಕ್ಕೆ ನೀನು ಬೈಯುತ್ತಿಯಾ ನಾಯಕ ಸೂಳೆಮಗನೇ, ಕಂಕ ಸೂಳೇಮಗನೇ ಎಂದು ಜಾತಿ ಹಿಡಿದು ಬೈದಾಡಿದ್ದಲ್ಲದೇ, ಎಂದು ಅವ್ಯಾಚ್ಯವಾಗಿ ಬೈದಿದ್ದು **ನನ್ನ ಸಂಜ್ಞಾನಕ್ಕೆ**

**ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ 352 ಮತ್ತು ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ ಕಲಂ 3(2)(r)(s)ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸದರಿ ಗಂಗಾಧರ ಅವರ ಬಲಗೈ ತೋರು ಬೆರಳಿಗೆ, ಎಡಗೈ ಹೆಬ್ಬೆರಳಿಗೆ ಬಾಯಿಂದ ಕಚ್ಚಿದ್ದಲ್ಲದೇ ಬಲಗೈ ಮುಷ್ಠಿಯಿಂದ ಬಲದವಡೆಗೆ ಗುದ್ದಿದ್ದರಿಂದ ಒಂದು ಹಲ್ಲು ಉದಿರಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ 117(2) ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಸದರಿ ಗಂಗಾಧರ ಅವರ ಜಗಳ ಬಿಡಿಸಲು ಬಂದ ಚಾಸಾ:2 ಈರಮ್ಮಳಿಗೆ ನೀನು ದಬ್ಬಿದ್ದರಿಂದ ಎಡಕೈಗೆ ನೋವುಂಟಾಗಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಭಾರತೀಯ ನ್ಯಾಯ ಸಂಹಿತೆ ಕಲಂ 115(2) ರ ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಆರೋಪಿಯಾದ ನೀನು ಚಾಸಾ-1 ಗಂಗಾಧರ ಪರಿಶಿಷ್ಟ ಪಂಗಡ ಜಾತಿಗೆ ಸೇರಿದವರು ಎಂದು ತಿಳಿದಿದ್ದು ಅವರ ವಿರುದ್ಧ ಮೇಲೆ ಹೇಳಿದ ಅಪರಾಧಿಕ ಕೃತ್ಯಗಳನ್ನುಎಸಗಿದ್ದು, **ನನ್ನ ಸಂಜ್ಞಾನಕ್ಕೆ ಬರುವ ಎಸ್‌ಸಿ/ಎಸ್‌ಟಿ ದೌಜನ್ಯ ತಡೆ ಕಾಯಿದೆ 3(2)(v-a) ಅಡಿ** ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಈ ಮೇಲಿನ ಆಪಾದನೆಗಳಿಗೆ ನಿಮ್ಮ ಮೇಲೆ ವಿಚಾರಣೆ ನಡೆಸಲಾಗುವುದು.

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಚಿತ್ರದುರ್ಗ.

# ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

**ಸ್ಪೆಷಲ್ ಕೇಸ್** (ಎಸ್.ಸಿ./ಎಸ್.ಟಿ.) **ನಂ. 40/2024**

**ಪಿರ್ಯಾದಿ** - ಸರ್ಕಾರದ ಪರವಾಗಿ **ಹಿರಿಯೂರು ಗ್ರಾಮಾಂತರ ಪೊಲೀಸರು**.

**- ವಿರುದ್ಧ -**

**ಆರೋಪಿ** - **ಮಹಾಂತೇಶ ಬಿನ್ ಸೋಮಶೇಖರಯ್ಯ,**
ವಯಸ್ಸು: 42 ವರ್ಷ, ವ್ಯವಸಾಯ,
ವಾಸ: ಬಾಲೇನಹಳ್ಳಿ ಗ್ರಾಮ, ಹಿರಿಯೂರು ತಾ. ಚಿತ್ರದುರ್ಗ ಜಿಲ್ಲೆ

## -ದೋಷಾರೋಪಣೆ-

1) ಈಗ ಕನ್ನಡದಲ್ಲಿ ಓದಿ ಹೇಳಿದ ದೋಷಾರೋಪಣೆ ಅರ್ಥವಾಯಿತೇ?

ಉತ್ತರಃ

2) ಈಗ ಓದಿ ಹೇಳಿದ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯೇ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಅವನಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ವಿವರಿಸಿ ಹೇಳಿಲಾಯಿತು ಹಾಗೂ ಆರೋಪಿಯು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು)

**(ಗಂಗಾಧರ ಚನ್ನಬಸಪ್ಪ ಹಡಪದ)**
ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.